**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನಾ ಸಮಿತಿ, ಧಾರವಾಡ.**

**ಅಧಿಸೂಚನೆ**

**ಆಡಳಿತ ಸಂಖ್ಯೆ.**118**/2026**
**ದಿನಾಂಕ: 23ನೇ ಫೆಬ್ರುವರಿ, 2026**

**ವಿಷಯ :** 2025-26ನೇ ಸಾಲಿಗೆ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನದ ನೀಡುವ ಯೋಜನೆಯ ಅಡಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ. ಲಾ-ಎಲ್‌ಎಡಿ/110/2026 ಬೆಂಗಳೂರು, ದಿನಾಂಕ: 09.02.2026

2. ಈ ಕಚೇರಿಯ ನಡುವಳಿಗಳು ಹಾಗೂ ಅದರ ಮೇಲೆ ಆದ ಆದೇಶ ದಿನಾಂಕ: 23.02.2026.

-----

2025-26 ನೇ ಸಾಲಿಗೆ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹ ಧನ ನೀಡುವ ಯೋಜನೆಯ ಅಡಿ ಅರ್ಹ ನವ ಕಾನೂನು ಪದವೀಧರ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಅಧಿಸೂಚನೆಗೆ ನಿಗದಿಪಡಿಸಿದ/ಲಗತ್ತಿಸಿದ ಅರ್ಜಿ ನಮೂನೆಯಲ್ಲಿ ಈ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಈ ಯೋಜನೆಗೆ ಅನ್ವಯಿಸುವ ನಿಯಮಗಳು ಈ ಕೆಳಗಿನಂತೆ ಇರುತ್ತವೆ.

1. ಈ ಯೋಜನೆಯ ಅಡಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಡಿಯಲ್ಲಿ ದಿನಾಂಕ: **01.06.2024 ರಿಂದ 31.05.2025** ರ ವರೆಗಿನ ಅವಧಿಯಲ್ಲಿ ವಕೀಲ ವೃತ್ತಿಗೆ ನೊಂದಾಯಿಸಿದವರಾಗಿರಬೇಕು.

2. ಈ ಯೋಜನೆಯಡಿಯಲ್ಲಿ ಪ್ರೋತ್ಸಾಹಧನದ ಮೊತ್ತ **ಪ್ರತಿ ಮಾಹೆಗೆ ರೂ.2,000/- (ಎರಡು ಸಾವಿರ ರೂಪಾಯಿಗಳು)ಗಳು ಒಟ್ಟು 24 ತಿಂಗಳುಗಳ ಅವಧಿಗೆ** ಸೀಮಿತವಾಗಿರುತ್ತದೆ.

3. ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ವಯೋ ನಿವೃತ್ತಿ, ಕಡ್ಡಾಯ ನಿವೃತ್ತಿ ಮತ್ತು ಸ್ವ-ಇಚ್ಛಾ ನಿವೃತ್ತಿ ಹೊಂದಿದ ನಂತರ ವಕೀಲ ವೃತ್ತಿ ನಡೆಸಲು ಇಚ್ಛಿಸುವ ಕಾನೂನು ಪದವೀಧರರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಮತ್ತು ಅಂತಹ ಯಾವುದೇ ಸೇವೆಯಿಂದ ತೆಗೆದು ಹಾಕಲ್ಪಟ್ಟ ಕಾನೂನು ಪದವೀಧರರಿಗೆ ಸಹ ಅನ್ವಯಿಸುವುದಿಲ್ಲ.

4. ಈ ಯೋಜನೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯ/ಕುಟುಂಬದ **ವಾರ್ಷಿಕ ವರಮಾನದ ಮಿತಿಯ ರೂ.40,000/- (ನಲವತ್ತು ಸಾವಿರ ರೂಪಾಯಿಗಳು)ಗಳನ್ನು ಮೀರತಕ್ಕದಲ್ಲ.**

Scanned with OKEN Scanner

5. ಇಂತಹದೇ ಸೌಲಭ್ಯವನ್ನು ಈ ಯೋಜನೆ/ಇತರೆ ಯೋಜನೆಯಡಿ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಇಲಾಖೆಯ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಈ ಯೋಜನೆಯ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲ.

6. ಹೊಸದಾಗಿ ವಕೀಲ ವೃತ್ತಿಯಲ್ಲಿ ತೊಡಗುವ ಕಾನೂನು ಪದವೀಧರರು ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿದ ನಂತರ ಸ್ಥಳೀಯ **ಸಂಬಂಧಿತ ತಾಲ್ಲೂಕಿನ ಹಿರಿಯ ನ್ಯಾಯಾಧೀಶರುಗಳ ಮುಖಾಂತರ ಮತ್ತು ಜಿಲ್ಲಾ ಹಂತದಲ್ಲಿ ಅರ್ಹ ಕಾನೂನು ಪದವೀಧರರು ನೇರವಾಗಿ ಸಮಿತಿಯ ಅಧ್ಯಕ್ಷರಿಗೆ ವಿಳಾಸಿಸಿದ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.** ಆಯ್ಕೆ ಸಮಿತಿಯು ನಿಯಮಗಳಿಗೆ ಅನುಸಾರವಾಗಿ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿಯು ಮಾಡುವುದು ಮತ್ತು ಫಲಾನುಭವಿಗಳಿಗೆ ಪ್ರೋತ್ಸಾಹಧನವನ್ನು ಖಜಾನೆ-2ರ ಮುಖಾಂತರ ವಿತರಿಸಲಾಗುವುದು.

7. ಅಧ್ಯಕ್ಷರು ಜಿಲ್ಲಾ ವಕೀಲರ ಸಂಘ ಹಾಗೂ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರುಗಳು ಈ ಯೋಜನೆಯ ಲಾಭವನ್ನು ಸಂಪೂರ್ಣವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಈ ಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳಲು ಸೂಚಿಸಲಾಗಿದೆ.

**ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕಃ 18.02.2026 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಃ 17.03.2026.**

ಅಭ್ಯರ್ಥಿಗಳು ಅನುಬಂಧ-1ರಲ್ಲಿ ಸೂಚಿಸಿದಂತೆ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಅಭ್ಯರ್ಥಿಯ ಭಾವಚಿತ್ರವನ್ನು ಅಂಟಿಸುವುದು ಹಾಗೂ ಮೊಬೈಲ್ (ವಾಟ್ಸ್ ಆ್ಯಫ್) ಸಂಖ್ಯೆಯನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ನಮೂದಿಸುವುದು. ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ಮುಂಚಿತವಾಗಿ ತಿಳಿಸಲಾಗುವುದು. ಅಭ್ಯರ್ಥಿಗಳು ಸಂದರ್ಶನದ ದಿನದಂದು ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಜಿಲ್ಲಾ ನ್ಯಾಯಾಲಯ, ಕಲಾಭವನ ಹತ್ತಿರ ಜುಬ್ಲಿ ಸರ್ಕಲ್, ಧಾರವಾಡ ಇವರ ಮುಂದೆ ತಮ್ಮ ಖರ್ಚಿನಲ್ಲಿ ಕಡ್ಡಾಯವಾಗಿ ಹಾಜರಾಗಲು ಸೂಚಿಸಲಾಗಿದೆ.

**(ಬಿ ಎಸ್ ಭಾರತಿ),**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ಅಧ್ಯಕ್ಷರು, ನವ ಕಾನೂನು ಪದವೀಧರರಿಗೆ**
**ಪ್ರೋತ್ಸಾಹಧನ ನೀಡುವ ಯೋಜನಾ ಸಮಿತಿ,**
**ಧಾರವಾಡ.**
PRL. DISTRICT & SESSIONS JUDGE
DHARWAD

**ಪ್ರತಿಯನ್ನು ಮಾಹಿತಿಗಾಗಿಃ**

1. ಆಡಳಿತ ವಿಭಾಗ, ಜಿಲ್ಲಾ ನ್ಯಾಯಾಲಯ, ಧಾರವಾಡ.
2. ಲೆಕ್ಕ ಪತ್ರ ವಿಭಾಗ, ಜಿಲ್ಲಾ ನ್ಯಾಯಾಲಯ, ಧಾರವಾಡ.

Scanned with OKEN Scanner

| ಭಾವಚಿತ್ರ |
|---|

| ಮೊಬೈಲ್ ಸಂಖ್ಯೆ: |
|---|

## ಅನುಬಂಧ-1

## ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯಡಿಯಲ್ಲಿ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಯ ನಮೂನೆ

| | | |
|---|---|---|
| 1) | ಅರ್ಜಿದಾರರ ಹೆಸರು<br>(ಎಸ್‌ಎಸ್‌ಎಲ್‌ಸಿ.)<br>ಅಂಕಪಟ್ಟಿಯಲ್ಲಿರುವಂತೆ : | |
| 2) | ಅರ್ಜಿದಾರರ ತಂದೆ/ಗಂಡ ಹೆಸರು:<br>(ಎಸ್‌ಎಸ್‌ಎಲ್‌ಸಿ.) ಅಂಕಪಟ್ಟಿಯಲ್ಲಿರುವಂತೆ : | |
| 3) | ಹುಟ್ಟಿದ ದಿನಾಂಕ<br>(ಎಸ್‌ಎಸ್‌ಎಲ್‌ಸಿ.) ಅಂಕಪಟ್ಟಿಯಲ್ಲಿರುವಂತೆ : | |
| 4) | ವಿಳಾಸ ಪ್ರಸ್ತುತ :<br><br>ಖಾಯಂ ವಿಳಾಸ :<br><br>ಕಚೇರಿ ವಿಳಾಸ : | |
| 5) | ವಿವಾಹಿತರೇ ? | |
| 6) | ಭಾರತೀಯ ಪ್ರಜೆಯೇ ? | |
| 7) | ಧರ್ಮ | |
| 8) | ಜಾತಿ ಮತ್ತು ಪ್ರವರ್ಗ | |
| 9) | ಶೈಕ್ಷಣಿಕ ವಿದ್ಯಾರ್ಹತೆಗಳು : | |

| ಕ್ರ. ಸಂ. | ತೇರ್ಗಡೆಗೊಂಡ ವಿದ್ಯಾರ್ಹತೆ | ವರ್ಷ | ಶೇಕಡಾ ಅಂಕ | ಪ್ರಮಾಣಪತ್ರದ ಪ್ರತಿ ಲಗತ್ತಿಸುವುದು |
|---|---|---|---|---|
| 1 | ಎಸ್.ಎಸ್.ಎಲ್.ಸಿ. (10th) | | | |
| 2 | ಪಿ.ಯು.ಸಿ. (12th) | | | |
| 3 | ಪದವಿ | | | |
| 4 | ಕಾನೂನು ಪದವಿ | | | |

Scanned with OKEN Scanner

| | | |
|---|---|---|
| 10) | ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೋಂದಾಯಿಸಿದ ಸಂಖ್ಯೆ ಮತ್ತು ದಿನಾಂಕ (ಸಂಬಂಧಿತ ದಾಖಲೆಯ ಪ್ರತಿ) | |
| 11) | ಪ್ರಸ್ತುತ ವಕೀಲವೃತ್ತಿ ನಡೆಸುತ್ತಿದ್ದಲ್ಲಿ ವಿವರ (ಸಂಬಂಧಿತ ದಾಖಲೆಯ ಪ್ರತಿ) | |
| 12) | ಇತರೇ ಮಾಹಿತಿ | |

**ಲಾ-ಎಲ್‌ಎಡಿ/110/2026**

ಮೇಲಿನ ನಮೂನೆಯಲ್ಲಿ ನೀಡಲಾಗಿರುವ ಮಾಹಿತಿಯನ್ನು ನಾನು ಪ್ರಜ್ಞಾಪೂರ್ವಕವಾಗಿ ಸತ್ಯವೆಂದು ಅರಿತು ನೀಡಿರುತ್ತೇನೆ. ಒಂದು ವೇಳೆ ಈ ಮಾಹಿತಿಯಲ್ಲಿ ಯಾವುದೇ ಅಂಶಗಳು ಸತ್ಯಾಂಶದಿಂದ ಕೂಡಿಲ್ಲವೆಂದು ತಿಳಿದು ಬಂದಲ್ಲಿ ಆಯ್ಕೆ ಪ್ರಾಧಿಕಾರವು/ಸರ್ಕಾರವು ನಿಯಮಾನುಸಾರ ನನ್ನ ಮೇಲೆ ಅವಶ್ಯಕ ಕಾನೂನು ಕ್ರಮ ಜರುಗಿಸಬಹುದೆಂದು ನಾನು ಒಪ್ಪಿಗೆಯನ್ನು ಈ ಮೂಲಕ ನೀಡಿರುತ್ತೇನೆ.

**ಅರ್ಜಿದಾರರ ಸಹಿ**

(ಹೆಸರು)